ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಫ್.ಸಿ ಸಿಂದಗಿÀ

**ಸಿ.ಸಿ ನಂ. 12/2023**

ಪಿರ್ಯಾದುದಾರರು ಃ ಸರಕಾರದ ಪರವಾಗಿ ಸಿಂದಗಿ ಪಿ.ಎಸ್

ವಿರುದ್ಧ

ಆರೋಪಿ : ಗಾಲೀಬ ತಂ. ಬಸೀರಸಾಬ ಮಿಠಾಯಿ ಮತ್ತು
ಇತರರು

ದೋಷಾರೋಪಣೆ

ಶ್ರೀ ನಾಗೇಶ ಕೆ. ಮೊಗೇರ.,ಬಿ.ಕಾಂ, ಎ.ಎಲ್.ಎಮ್
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು. ಆದ ನಾನು, ಆರೋಪಿಯರಾದ ನೀವು

1. ಗಾಲೀಬ ತಂ. ಬಸೀರಸಾಬ ಮಿಠಾಯಿ
   ವಯಾಃ 22 ವರ್ಷ, ಉಃ ಚಾಲಕ ,
   ಸಾಃ ಆಲಮೇಲ, ತಾಃ ಸಿಂದಗಿ.

2. ಪಿಂಟು @ ಅಶೋಕ ತಂ. ಕಾಂತಪ್ಪ ಬುಸನೂರ,
   ವಯಾಃ 27 ವರ್ಷ, ಉಃ ವ್ಯಾಪಾರ ,
   ಸಾಃ ಆಲಮೇಲ, ತಾಃ ಸಿಂದಗಿ.

3. ಜಗದೀಶ ತಂ. ಅಶೋಕ ತೆಲ್ಲೂರ,
   ವಯಾಃ 28 ವರ್ಷ, ಉಃ--
   ಸಾಃ ಆಲಮೇಲ, ತಾಃ ಸಿಂದಗಿ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತಿದ್ದೇನೆ.

ಮೊದಲನೇಯದಾಗಿ ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ಸಿಂದಗಿ-ಆಲಮೇಲ ರಸ್ತೆಯ, ಗಣಿಹಾರ ಕ್ರಾಸ ಹತ್ತಿರ ದಿನಾಂಕ 27.07.2021 ರಂದು ಸಾಯಂಕಾಲ 4.15 ಗಂಟೆ ಸುಮಾರಿಗೆ ಆರೋಪಿತರಾದ ನೀವು ಸರಕಾರದಿಂದಾಗಲೀ ಅಥವಾ ಆಹಾರ ಇಲಾಖೆಯಿಂದಾಗಲೀ ಅನುಮತಿ ಪಡೆಯದೇ ಸರಕಾರದ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಿದ ಅಕ್ಕಿಯನ್ನು ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಮಿನಿ ವಾಹನ ನಂ.ಕೆ.ಎ 28/ಡಿ-9854 ರಲ್ಲಿ ಸುಮಾರು 30 ರಿಂದ 35 ಕೆ.ಜೆ ಕರಿ ಬಣ್ಣದ 20 ಹಾಗೂ ಬಿಳಿ ಬಣ್ಣದ 10 ಒಟ್ಟು 10 ಕ್ವಿಂಟಲ್ ಅಕ್ಕಿಯನ್ನು

ಆರೋಪಿ ನಂ.2 ಮತ್ತು 3 ರವರಾದ ನೀವು ಹೇಳಿದ ಪ್ರಕಾರ ಆರೋಪಿ ನಂ.1 ರವರಾದ ನೀವು ತುಂಬಿಕೊಂಡು ಹೊರಟಾಗ ಸಿಕ್ಕಿ ಹಾಕಿಕೊಂಡಿದ್ದು ಈ ಮೂಲಕ 3 ಸಹವಾಚಕ ಕಲಂ 7 ಅಗತ್ಯ ವಸ್ತುಗಳ ಕಾಯ್ದೆ 1955 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಈ ಮೇಲಿನ ಆರೋಪಣೆಗಳಿಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕ 20.06.2024

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಸಿಂದಗಿ.